ಕರ್ನಾಟಕ ವಿಧಾನಸಭೆ

ಸೋಮವಾರ ದಿನಾಂಕ 26ನೇ ಜುಲೈ 2004ರಂದು

ಸದನವು ವಿಧಾನಸೌಧದಲ್ಲಿರುವ ವಿಧಾನಸಭೆಯ ಸಭಾಂಗಣದಲ್ಲಿ ಬೆಳಿಗ್ಗೆ 11 ಗಂಟೆ 10 ನಿಮಿಷಕ್ಕೆ ಸಮಾವೇಶಗೊಂಡಿತು.

ಅಧ್ಯಕ್ಷರು (ಶ್ರೀ ಕೃಷ್ಣರವರು) ಪೀಠವನ್ನು ಅಲಂಕರಿಸಿದ್ದರು.

1) ಅಧ್ಯಕ್ಷರ ಅಪ್ಪಣೆ ಮೇರೆಗೆ: ಆಲಮಟ್ಟಿ ಅಣೆಕಟ್ಟಿನ ಬಗ್ಗೆ

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ: ಆಲಮಟ್ಟಿ ವಿಷಯ ಇಷ್ಟು ದೊಡ್ಡ ಗಂಭೀರವಾದಂಥ ಪ್ರಮುಖವಾದಂಥ ವಿಷಯ ಅದಕ್ಕೆ ಸರ್ಕಾರ ಏನು ಉತ್ತರ ಕೊಡುತ್ತದೆನ್ನುವುದನ್ನು ಸ್ಪಷ್ಟಪಡಿಸಬೇಕು. ಇಡೀ ಉತ್ತರ ಕರ್ನಾಟಕ ಭಾಗದಲ್ಲಿ, ಬಿಜಾಪುರ ಬಾಗಲಕೋಟೆಯಿಂದ ಹಿಡಿದು ಆ ಭಾಗದಲ್ಲಿ ಸಮಸ್ಯೆ ಉಲ್ಬಣಗೊಳ್ಳುತ್ತಿದೆ. ಹಾಗಾಗಿ....

ಅಧ್ಯಕ್ಷರು : ಪ್ರಶ್ನೋತ್ತರ ಮೊದಲು ತೆಗೆದುಕೊಳ್ಳೋಣ. ಆ ಮೇಲೆ ಅವಕಾಶ ಕೊಡುತ್ತೇನೆ. Of course the matter is very serious, I know. ಅದಕ್ಕೆ ಉತ್ತರ ಕೊಡಿಸುತ್ತೇನೆ. ಮೊದಲು ಪ್ರಶ್ನೋತ್ತರ. ದಯಮಾಡಿ ಸಹಕರಿಸಿ.

ಶ್ರೀ ಪ್ರಕಾಶ್ ಬಿ. ಹುಕ್ಕೇರಿ : ಮಾನ್ಯ ವಿರೋಧ ಪಕ್ಷದ ನಾಯಕರು ಅಲ್ಲಿಗೆ ಹೋಗಿದ್ದು ಈವತ್ತಿನ ಬೆಳಗ್ಗಿನ ಪೇಪರ್‌ನಲ್ಲಿ ಬಂದಿದೆ. ನೀರು ಬಿಟ್ಟಿಲ್ಲ ಎನ್ನುವುದನ್ನು ಅವರು ಹೋಗಿ ನೋಡಿಕೊಂಡು ಬಂದಿದ್ದಾರೆ.

Mr. Speaker: Of course, Matter Serious ಇದೆ. ಅದಕ್ಕೆ ಸರ್ಕಾರ ಉತ್ತರ ಕೊಡಬೇಕಾಗುತ್ತದೆ. ಪ್ರಶ್ನೋತ್ತರ ನಿಯಮಾವಳಿ ಪ್ರಕಾರ ಆಗಲಿ. ಅನಂತರ ಸರ್ಕಾರ ಉತ್ತರ ಕೊಡುತ್ತದೆ. ದಯಮಾಡಿ ಸಹಕರಿಸಿ.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ : ಮಾನ್ಯ ಅಧ್ಯಕ್ಷರೆ, ಆಲಮಟ್ಟಿ ಮತ್ತು ಸಿ.ಇ.ಟಿ. ಬಗ್ಗೆ ಇವತ್ತು ಸದನದಲ್ಲಿ ಸರ್ಕಾರದಿಂದ ಉತ್ತರ ಕೊಡಿಸಬೇಕು.

ಅಧ್ಯಕ್ಷರು : ಶ್ರೀ ವಿಶ್ವೇಶ್ವರ ಹೆಗಡೆಯವರೆ, ಕೊಡಿಸೋಣ. ಮೊದಲು ಪ್ರಶ್ನೋತ್ತರ ಆಗಲಿ.

ಅಧ್ಯಕ್ಷರು : ಆಯಿತು, ಅದಕ್ಕೆ ನಾನು ಉತ್ತರ ಕೊಡಿಸುತ್ತೇನೆ. ಈಗ ಪ್ರಶ್ನೋತ್ತರ. ದಯಮಾಡಿ ಸಹಕರಿಸಿ.

2. ಪ್ರಶ್ನೋತ್ತರ

(ಅ) ಚುಕ್ಕೆ ಗುರುತಿನ ಪ್ರಶ್ನೆಗಳಿಗೆ ಸದನದಲ್ಲಿ ನೀಡಲಾದ ಉತ್ತರಗಳು

ದತ್ತಪೀಠ ದೇವಾಲಯದ ನಿತ್ಯ ಪೂಜೆ

61 (627) : ಶ್ರೀ ಸುನೀಲ್‌ಕುಮಾರ್ (ಕಾರ್ಕಳ) ಮಾನ್ಯ ಕಂದಾಯ ಮತ್ತು ಸಂಸದೀಯ ವ್ಯವಹಾರಗಳ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಚಿಕ್ಕಮಗಳೂರಿನ ಚಂದ್ರದ್ರೋಣ ಪರ್ವತದ ಮೇಲೆ ಹಿಂದೂಗಳ ಪವಿತ್ರ ಧಾರ್ಮಿಕ ಯಾತ್ರಾ ಸ್ಥಳವಾಗಿ ಗುರು ದತ್ತಾತ್ರೇಯರ ದತ್ತಪೀಠ ಗುಹೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಹಾಗಿದ್ದಲ್ಲಿ, ಇದರ ನಿರ್ವಹಣೆಗೆ ಸರ್ಕಾರ ಯಾವ ಕ್ರಮವನ್ನು ಕೈಗೊಂಡಿದೆ ಹಾಗೂ ಇದು ಮುಜರಾಯಿ ಇಲಾಖೆಯ ವ್ಯಾಪ್ತಿಗೊಳಪಡುವುದೇ;

ಇ) ಈ ದತ್ತಪೀಠ ದೇವಾಲಯದ ನಿತ್ಯ ಪೂಜೆ ಹಾಗೂ ಧಾರ್ಮಿಕ ಆಚರಣೆಗಾಗಿ ಸರ್ಕಾರ ಯಾವ ಕಾರ್ಯಯೋಜನೆ ಹಮ್ಮಿಕೊಂಡಿದೆ;

ಈ) ಈ ದೇವಾಲಯದ ನಿತ್ಯ ಪೂಜೆಗೆ ಅನುಕೂಲವಾಗುವಂತೆ ಅರ್ಚಕರುಗಳನ್ನು ಸರ್ಕಾರ ನೇಮಕ ಮಾಡಿದೆಯೇ;

ಉ) ಇಲ್ಲದಿದ್ದಲ್ಲಿ, ನೇಮಕ ಮಾಡುವಲ್ಲಿ ಅನಗತ್ಯ ವಿಳಂಬ ಧೋರಣೆ ಅನುಸರಿಸಲು ಕಾರಣವೇನು;

ಊ) ಯಾವಾಗ ಅರ್ಚಕರನ್ನು ನೇಮಿಸಿ ಪೂಜೆಗೆ ನಿಯುಕ್ತಿಗೊಳಿಸಲಾಗುತ್ತಿದೆ?

ಶ್ರೀ ಎಂ.ಪಿ. ಪ್ರಕಾಶ್ (ಕಂದಾಯ ಮತ್ತು ಸಂಸದೀಯ ವ್ಯವಹಾರಗಳ ಸಚಿವರು)

ಅ) ಚಿಕ್ಕಮಗಳೂರಿನ ಚಂದ್ರದ್ರೋಣ ಪರ್ವತ ಶ್ರೇಣಿಯಲ್ಲಿ ಹಿಂದೂ ಮತ್ತು ಮುಸ್ಲಿಂ ಜನಾಂಗದವರ ಭಾವೈಕ್ಯತಾ ಕೇಂದ್ರವೆನಿಸಿರುವ ಶ್ರೀ ಗುರು ದತ್ತಾತ್ರೇಯ ಬಾಬಾಬುಡನ್ ಸ್ವಾಮಿ ದರ್ಗಾ ಸಂಸ್ಥೆಯು ಇರುವುದು ಸರ್ಕಾರದ ಗಮನದಲ್ಲಿದೆ.

ಆ) ಸದರಿ ಸಂಸ್ಥೆಯು ಕರ್ನಾಟಕ ಹಿಂದೂ ಧಾರ್ಮಿಕ ದತ್ತಿ, ಇಲಾಖೆಗೆ ಸಂಬಂಧಿಸಿದ ಅಧಿಸೂಚಿತ ಸಂಸ್ಥೆ ಆಗಿರುತ್ತದೆ. ಈ ಸಂಸ್ಥೆಯ ಆಡಳಿತ ವ್ಯವಹಾರಗಳನ್ನು ಸುಸೂತ್ರವಾಗಿ ನಡೆಸುವ ಸಲುವಾಗಿ ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿ 6 ಜನ ಅಧಿಕಾರಿಗಳ ಸಮಿತಿಯನ್ನು ಸರ್ಕಾರವು ದಿನಾಂಕ 26–8–2003ರಲ್ಲಿ ನೇಮಿಸಿದೆ.

ಇ) ಈ ಸಂಸ್ಥೆಯಲ್ಲಿ ಹಿಂದಿನಿಂದ ನಡೆದುಕೊಂಡು ಬಂದ ಪದ್ಧತಿಯಂತೆ ಮುಸ್ಲಿಂ ಜನಾಂಗದ ಮುಜಾವರರು ದಿನನಿತ್ಯದ ಧಾರ್ಮಿಕ ಆಚರಣೆಗಳನ್ನು ನಡೆಸಿಕೊಂಡು ಬರುತ್ತಿದ್ದಾರೆ.

ಈ) ಉಚ್ಚ ನ್ಯಾಯಾಲಯದ ಆದೇಶ ಡಬ್ಲ್ಯೂಪಿ/2294/1984 ಮತ್ತು ಧಾರ್ಮಿಕ ದತ್ತಿ ಆಯುಕ್ತರು, ಬೆಂಗಳೂರು ಇವರ ಆದೇಶ ಸಂ: ಎಡಿಎಂ/7/ಪಿಟಿಎನ್/9/84–85, ದಿನಾಂಕ 25–2–1989ರಂತೆ 1975ಕ್ಕಿಂತ ಹಿಂದೆ ಇದ್ದ ಪದ್ಧತಿಯನ್ನೇ ಅನುಸರಿಸಲು ಆದೇಶಿಸಲಾಗಿದೆ. ಈ ಆದೇಶದಂತೆ ಶಾಖಾದ್ರಿಯಿಂದ ನೇಮಕಗೊಂಡ ಮುಜಾವರರು ಮಾತ್ರ ಗುಹೆಯೊಳಗೆ ಪ್ರವೇಶಿಸಿ, ಶ್ರೀದತ್ತ ಪಾದುಕೆಗಳಿಗೆ ಪೂಜೆ ಮಾಡಲು ಮತ್ತು ನಂದಾದೀಪ ಬೆಳಗಿಸಲು ಅವಕಾಶವಿದೆ. ಬೇರೆಯವರಿಗೆ ಅವಕಾಶವಿರುವುದಿಲ್ಲ. ಆದುದರಿಂದ ಈ ದತ್ತಪೀಠದ ಪೂಜೆಗೆ ಯಾವ ಹಿಂದೂ ಅರ್ಚಕರುಗಳನ್ನೂ ನೇಮಕ ಮಾಡಲು ನಿಯಮಾನುಸಾರ ಅವಕಾಶವಿಲ್ಲ.

ಉ) ಮೇಲ್ಕಂಡ ಉತ್ತರದ ಹಿನ್ನಲೆಯಲ್ಲಿ ಪ್ರಶ್ನೆ ಉದ್ಭವಿಸುವುದಿಲ್ಲ.

ಊ) ಪ್ರಶ್ನೆ ಉದ್ಭವಿಸುವುದಿಲ್ಲ.

ಶ್ರೀ ಸುನೀಲ್‌ಕುಮಾರ್ : ಮಾನ್ಯ ಅಧ್ಯಕ್ಷರೆ, ಸರ್ಕಾರ ಉತ್ತರ ಕೊಟ್ಟಿರುವುದರಲ್ಲಿ ದತ್ತಾತ್ರೇಯ ಪೀಠವನ್ನು ಜಿಲ್ಲಾಡಳಿತ ಆವತ್ತು ವಕ್ಫ್ ಬೋರ್ಡ್‌ಗೆ ಕೊಟ್ಟಾಗ ಅಲ್ಲಿರುವಂಥ ಸ್ಥಳೀಯರು ನ್ಯಾಯಾಲಯಕ್ಕೆ ಹೋದರು, ಇದು ವಕ್ಫ್ ಬೋರ್ಡಿನ property ಅಲ್ಲ, ಇದು ಮುಜರಾಯಿ

ಇಲಾಖೆಗೆ ಸೇರಿದ್ದು ಎಂದು ನ್ಯಾಯಾಲಯ ಆದೇಶ ಕೊಟ್ಟಿದೆ. ಮುಜರಾಯಿ ಇಲಾಖೆಗೆ ಸೇರಿದಂಥ ದೇವಸ್ಥಾನದಲ್ಲಿ ಮುಸಲ್ಮಾನರು ಯಾವ ರೀತಿ ದತ್ತಾತ್ರೇಯರ ಬೆಳ್ಳಿ ಪಾದುಕೆಗಳಿಗೆ ಪೂಜೆ ಮಾಡುತ್ತಾರೆ? ಸರ್ಕಾರ ಆದೇಶ ಕೊಟ್ಟಿದೆ, ಹಿಂದೂ ಪೂಜಾ ಪದ್ಧತಿ ಪ್ರಕಾರ ಅಲ್ಲಿ ಪೂಜೆ ನಡೆಯಬೇಕೆಂದು ಹೈಕೋರ್ಟಿನ ಆದೇಶದಲ್ಲಿ ಹೇಳಿದೆ. ಆದರೆ ಇವತ್ತಿನ ತನಕ ಚಂದ್ರದ್ರೋಣ ಪರ್ವತದಲ್ಲಿರುವಂಥ ದತ್ತಾತ್ರೇಯ ಪೀಠದ ಬೆಳ್ಳಿ ಪಾದುಕೆಗಳಿಗೆ ಹಿಂದೂಗಳು ಪೂಜೆ ಸಲ್ಲಿಸಲಿಕ್ಕೆ ಅವಕಾಶವಿಲ್ಲ. ಮುಸಲ್ಮಾನರೇ ಅಲ್ಲಿ ಪೂಜೆಗಳನ್ನು ಸಲ್ಲಿಸುತ್ತಿದ್ದಾರೆಯೇ ವಿನಃ ಹಿಂದೂಗಳು ಪೂಜೆ ಸಲ್ಲಿಸಬೇಕಾದರೆ ವಿನಾಕಾರಣ ನಾನಾ ರೀತಿಯ ತೊಂದರೆಗಳನ್ನು ಸರ್ಕಾರ ಕೊಡುತ್ತಿದೆ. ನನಗೆ ಅರ್ಥವಾಗದಿರುವ ಸಂಗತಿ ಏನಂದರೆ ಮುಜರಾಯಿ ಇಲಾಖೆಗೆ ಸೇರಿದಂಥ ದೇವಸ್ಥಾನದಲ್ಲಿ ಮುಸಲ್ಮಾನ ಅರ್ಚಕರು ಯಾವ ರೀತಿ ಬರುತ್ತಾರೆ? ಸರ್ಕಾರ ಐದು ಜನ ಮುಜಾವರರನ್ನು ನೇಮಕ ಮಾಡಿದೆ ಎಂದು ಹೇಳುತ್ತಿದೆ. ದೇವಸ್ಥಾನದಲ್ಲಿ ಮುಸಲ್ಮಾನರು ಅದು ಯಾವ ರೀತಿ ಪೂಜೆ ಮಾಡುವುದು?

ಶ್ರೀ ಎಂ.ಪಿ. ಪ್ರಕಾಶ್ : ಸನ್ಮಾನ್ಯ ಅಧ್ಯಕ್ಷರೆ, ಇದೊಂದು ಬಹಳ ಭಾವನಾತ್ಮಕವಾದಂಥ ಪ್ರಶ್ನೆಯಾಗಿದೆ. ಇದರಲ್ಲಿ ಹಿಂದೆ ಇತಿಹಾಸದಲ್ಲಿ ನಡೆದಿರತಕ್ಕಂಥ ಮತ್ತು ನಮ್ಮ ಪರಂಪರೆಯಲ್ಲಿ ನಡೆದುಕೊಂಡು ಬಂದಿರತಕ್ಕಂಥ ಕೆಲವು ವಿಚಾರಗಳು, ದತ್ತಪೀಠಕ್ಕೆ ಸಂಬಂಧಪಟ್ಟಂತೆ ಇದೊಂದು ಭಾವನಾತ್ಮಕವಾದಂಥ ವಿಚಾರ ಆಗುವುದರ ಜೊತೆಗೆ ಭಾವೈಕ್ಯತೆಗೆ ಕೂಡ ಅನುಕೂಲವಾಗುವಂಥ ರೀತಿಯ ಕೆಲಸ ಇಲ್ಲಿ ಆಗಿದೆ. ಹಿಂದೆ 1964ರಲ್ಲಿ ಇದು ವಕ್ಫ್ ಕಾನೂನಿಗೆ ಸೇರಿಸಬೇಕೆನ್ನುವಂಥ ಅಧಿಸೂಚನೆ 22–5–1975ರಲ್ಲಿ ಬಂತು. ಆದಾದಮೇಲೆ ಇದರ ಬಗ್ಗೆ ಕೋರ್ಟಿಗೆ ಹೋದಾಗ ಈ ತರಹದಲ್ಲಿ ವಕ್ಫ್ ಪ್ರಾಪರ್ಟಿಗೆ ಸೇರಿಸಿಕೊಳ್ಳಬಾರದು ಎನ್ನತಕ್ಕಂಥದ್ದೂ ಕೂಡ ಆಗಿದೆ. ಅದಾದಮೇಲೆ 7–11–1981ರಲ್ಲಿ ಉಚ್ಚನ್ಯಾಯಾಲಯ ಎತ್ತಿಹಿಡಿದು ಏನು ಸರ್ವೋಚ್ಚ ನ್ಯಾಯಾಲಯವು ಈ ಅರ್ಜಿಯನ್ನು ಸಹ ವಜಾ ಮಾಡಿ ಈ ಸಂಸ್ಥೆಯ ಧಾರ್ಮಿಕ ದತ್ತಿ ಇಲಾಖೆಯಿಂದಲೇ 1977ರ ಕರ್ನಾಟಕ ಮತೀಯ ಮತ್ತು ಧರ್ಮಾರ್ಥ ಸಂಸ್ಥೆ ಕಾಯಿದೆಯಂತೆ ನಿರ್ವಹಿಸಲಿಕ್ಕೆ ಅವಕಾಶವನ್ನು ಕಲ್ಪಿಸಿಕೊಟ್ಟಿತ್ತು. ಆ ಕಾರಣಕ್ಕಾಗಿಯೇ ಅಲ್ಲಿರತಕ್ಕಂಥ ಅವರೇನು ಮುಸಲ್ಮಾನ್ ಮುಜಾಹಿದ್ದೀನ್‌ಗಳು ಮತ್ತು ಮುಜಾಹಿದ್‌ಗಳೆಂದು ಹೇಳುತ್ತೀರಿ ಅದು ತಪ್ಪು, ಅವರು ಈ ವಿಚಾರಗಳಲ್ಲಿ ಪೂಜೆ ಮಾಡತಕ್ಕಂಥ ಅರ್ಹತೆ ಪೂಜೆಯಲ್ಲಿ ಹೋಗಿ ಆ ಪಾದುಕೆಗಳನ್ನು ಪೂಜೆ ಮಾಡತಕ್ಕಂಥ ಅಧಿಕಾರವನ್ನೂ ಕೂಡ ಅವರಿಗೆ ಕೊಟ್ಟರು. ಈ ವಿಚಾರದಲ್ಲಿ ಅಲ್ಲಿರತಕ್ಕಂಥ ಹಿಂದೂ ಸಂಘಟನೆಗಳು ಈಗಾಗಲೇ ಮಾನ್ಯ ಸದಸ್ಯರು ಪ್ರಸ್ತಾಪ ಮಾಡಿದಂತೆ 25–2–1989ರಲ್ಲಿ 1975ಕ್ಕಿಂತ ಹಿಂದೆ ಇದ್ದಂಥ ಪದ್ಧತಿಯನ್ನು ನೀವು ಮುಂದುವರಿಸಿಕೊಂಡು ಹೋಗಬೇಕೆಂದು ಹೇಳಿದರು. ಈಗಿರತಕ್ಕಂಥ ನಮ್ಮ ಧಾರ್ಮಿಕ ದತ್ತಿ ಮತ್ತು ಧರ್ಮಾದಾಯ ದತ್ತಿಗಳ ಅಧಿನಿಯಮ 58ರ ಪ್ರಕಾರ ಯಾವ ಸಂಪ್ರದಾಯ, ಆಚರಣೆ ಮತ್ತು ಸಮಾರಂಭ ಮತ್ತು ಪದ್ಧತಿಗಳಿವೆ, ಆ ಪದ್ಧತಿಗಳಲ್ಲಿ ನಾವು ಹಸ್ತಕ್ಷೇಪ ಮಾಡಬಾರದೆನ್ನತಕ್ಕಂಥದ್ದು ಇದೆ. ಈ ವಿಚಾರದಲ್ಲಿ ಗುರು ದತ್ತಾತ್ರೇಯ ಪೀಠ ದೇವಸ್ಥಾನದ ಸಂವರ್ಧನಾ ಸಮಿತಿಯವರು 43621:2003 ಎಂದು ಹೇಳಿ ಒಂದು ರಿಟ್ ಅರ್ಜಿಯನ್ನು ಶ್ರೇಷ್ಠ ನ್ಯಾಯಾಲಯದಲ್ಲಿ ಹಾಕಿದ್ದಾರೆ. ಆ ಶ್ರೇಷ್ಠ ನ್ಯಾಯಾಲಯದಲ್ಲಿ ಈ ಆಜ್ಞೆಯನ್ನೇ ಪ್ರಶ್ನಿಸಿ ಅವರು ಹಾಕಿದ್ದಾರೆ. ಈಗ ನಾವು ನ್ಯಾಯಾಲಯದಿಂದ ತೀರ್ಮಾನ ಬರಬೇಕೆಂದು ಕಾಯುತ್ತಿದ್ದೇವೆ. ಈಗ

ಅವರು ಮುಸಲ್ಮಾನರು ಹಿಂದೂಗಳ ಪೂಜೆಯನ್ನು ಹೇಗೆ ಮಾಡುತ್ತಾರೆ ಎನ್ನತಕ್ಕಂಥ ಮಾತನ್ನು ಹೇಳುತ್ತಾರೆ. ಸೂಫಿ ಸಂತರ ಪರಂಪರೆ ಇರತಕ್ಕಂಥದ್ದು ಕೂಡ ನಮಗೆ ಗೊತ್ತಿದೆ. ಕರ್ನಾಟಕದ ಅನೇಕ ಭಾಗದಲ್ಲಿಯೂ ಕೂಡ ಈ ಭಾವೈಕ್ಯತೆಗೆ ಸಂಬಂಧಪಡುವಂಥ ವಿಚಾರಗಳೂ ಕೂಡ ಇವೆ. ಈಗ ಉದಾಹರಣೆಗೆ ಹೇಳುವುದಾದರೆ, ಶಿರಹಟ್ಟಿ ಫಕೀರ ಸ್ವಾಮಿಗಳ ಒಂದು ಮಠ ಇದೆ. ಇಲ್ಲಿಗೆ ನಮ್ಮ ಶಾಸಕರು ಕೂಡ ಬಂದಿದ್ದಾರೆ, ಅಲ್ಲಿ ಉತ್ತರ ಕರ್ನಾಟಕ ಭಾಗದ ಜನತೆಗೆಲ್ಲಾ ಗೊತ್ತು. ಅಲ್ಲಿರುವಂಥ ಮಠಾಧೀಶ ಆತ ಜಂಗಮರಾಗಿರುತ್ತಾರೆ. ಆದರೆ ಅವರು ಕಾವಿ ಬಟ್ಟೆಯನ್ನು ಧರಿಸುವುದಿಲ್ಲ. ಅವರು ಫಕೀರರಂತೆ ಹಸಿರು ಬಟ್ಟೆಯನ್ನು ಧರಿಸಿರುತ್ತಾರೆ. ಅವರು ಸಮಾಧಿಯಾಗುವಂಥ ಸಂದರ್ಭ ಬಂದಾಗ ಅವರಿಗೆ ಏನಾದರೂ ಆದರೆ ಅವರನ್ನು ಮೊದಲು ಅವರ ಮುಸಲ್ಮಾನ ಬಾಂಧವರಿಗೆ ಕೊಡುತ್ತಾರೆ. ಅವರು ಎಲ್ಲ ಸ್ವಚ್ಛ ಮಾಡಿ ಆ ಕುರಾನಿನ ಪದ್ಧತಿ ಪ್ರಕಾರ, ಅದಾದ ಮೇಲೆ ಮತ್ತೆ ಲಿಂಗಾಯಿತ ಧರ್ಮದ ಜಂಗಮರಿಗೆ ಅದನ್ನು ವಹಿಸಿಕೊಡುತ್ತಾರೆ. ಆಗ ಅವರು ಅದರ ಶವಸಂಸ್ಕಾರ ಮಾಡುತ್ತಾರೆ. ಅಲ್ಲಿರತಕ್ಕಂಥ ಸಮಾಧಿಗಳನ್ನು ಏನು ಕಟ್ಟಿದ್ದಾರೆ, ಕೆಳಗಡೆ ಇರತಕ್ಕಂಥ ಸಮಾಧಿಯಲ್ಲಿ ಲಿಂಗ ಮೊದಲಾದುದೆಲ್ಲಾ ಇರುತ್ತದೆ, ಆದರೆ ಅದರ ಮೇಲಿರತಕ್ಕಂಥದ್ದಕ್ಕೆ ನಾವು ಅಲ್ಲಿರುವಂಥ ಚಾರ್ಮಿನಾರ್ ರೀತಿಯಲ್ಲಿ 4 ಶಕ್ತಿಗಳಿಗೆ ಸಂಬಂಧಪಡುವಂಥ ರೀತಿಯಲ್ಲಿ ಆ ಕಟ್ಟಡಗಳನ್ನು ಕಟ್ಟಿರುತ್ತಾರೆ. ಅಂದರೆ ಹಿಂದೂ ಮತ್ತು ಮುಸ್ಲಿಂ ಸಂಪ್ರದಾಯಕ್ಕೆ ಒಳಗಾಗುವಂಥ ರೀತಿಯ ವಾಸ್ತುಶಿಲ್ಪದಲ್ಲಿ ಅದನ್ನು ಕಟ್ಟಿರುತ್ತಾರೆ. ಇದೇ ರೀತಿಯಲ್ಲಿ ಬೆಳಗಾವಿ ಜಿಲ್ಲೆಯಲ್ಲಿರತಕ್ಕಂಥ ಗೋಡಿಗೇರಿ ಭಾಗದಲ್ಲಿ ಡಾ: ಚಂದ್ರಶೇಖರ್ ಕಂಬಾಕ್‌ರವರು ಬರತಕ್ಕಂಥ ಊರು ಏನಿದೆ, ಅಲ್ಲಿ ಹಿಂದೂ ಮುಸ್ಲಿಂರಿಗೆ ಸಂಬಂಧಪಡುವಂಥ ರೀತಿಯಲ್ಲಿ ಭಾವೈಕ್ಯತೆ ಇರತಕ್ಕಂಥದ್ದು ಕಾಣುತ್ತೇವೆ. ಹೀಗೆ ಸೂಫಿ ಪರಂಪರೆ ಇರತಕ್ಕಂಥ ಮುಸ್ಲಿಂ ಧರ್ಮದಲ್ಲಿ ಕೂಡ ಬದಲಾವಣೆಯಾಗಿದೆ. ಇಲ್ಲಿ ದತ್ತಾತ್ರೇಯ ಎನ್ನುವಂಥದ್ದರ ಪರಿಕಲ್ಪನೆಯೂ ಕೂಡ ಇದು ಹೆಚ್ಚಿನ ವಿಚಾರ ಆಗುತ್ತದೆ. ಇದರ ಬಗ್ಗೆ ನೇರವಾಗಿ ಹೇಳುವುದಾದರೆ ಪ್ರಾಯಶಃ ಆದಿಮಾನವ ತನ್ನ ದನಗಾಯಿಯಾದಂಥ ವೃತ್ತಿಯನ್ನು ಬಿಟ್ಟು ಆತ ಬೇಸಾಯ ಸಂಸ್ಕೃತಿಗೆ ತನ್ನನ್ನು ತಾನು ಅಳವಡಿಸಿಕೊಳ್ಳುವಂಥ ಸಂದರ್ಭದಲ್ಲಿ ಮೈಲಾರಲಿಂಗ ಮತ್ತು ದತ್ತಾತ್ರೇಯ ಆತ ಈ ಒಂದು ಸ್ಥಿತ್ಯಂತರದ ಅವಧಿಯಲ್ಲಿ ಇರುವಂಥ ದೇವಾನುದೇವತೆ ಎಂದು ನಾವು ಭಾವಿಸಿಕೊಳ್ಳಬಹುದು. ಏಕೆಂದರೆ ಆತನ ಹಿಂದಿರತಕ್ಕಂಥದ್ದು ಹಸು, ಅದರ ಮುಂದಿರತಕ್ಕಂಥದ್ದು ಒಂದು ನಾಯಿ, ಅದೇ ರೀತಿ ಮೈಲಾರಲಿಂಗನಿಗೂ ಕೂಡ ಆ ರೀತಿಯಲ್ಲಿ ಮಲೆಗಳಲ್ಲಿರತಕ್ಕಂಥವರು ಆ ಅರಣ್ಯಪ್ರದೇಶಗಳಲ್ಲಿನ ರೀತಿಯ ಬೇಟೆಯ ಸಂಸ್ಕೃತಿಯನ್ನು ಬಿಟ್ಟು ಆತ ಪಶುಸಂಗೋಪನಾ ಸಂಸ್ಕೃತಿಗೆ ಬಂದಾಗ ಪಶುಸಂಗೋಪನಾ ಸಂಸ್ಕೃತಿಯಿಂದ ಕೃಷಿ ಸಂಸ್ಕೃತಿಗೆ ಆತ ಅಳವಡಿಸಿಕೊಂಡಿರತಕ್ಕಂಥದ್ದರ ಒಂದು ಸಾಂಕೇತಿಕ ದೇವರು ಅವರು ಆಗಿರುವುದರಿಂದ ಇಲ್ಲಿಯ ಸಂಪ್ರದಾಯಗಳನ್ನು ಮುರಿಯಬಾರದು ಎನ್ನುವ ಕಾರಣಕ್ಕಾಗಿಯೇ ಅವರೇ ಯಾರು ಅರ್ಚಕರು ಇರುತ್ತಾರೆ ಅವರು ಪೂಜೆ ಮಾಡುವುದಕ್ಕೆ ಕರೆದುಕೊಂಡು ಹೋಗುತ್ತಾರೆ. ನ್ಯಾಯಾಲಯದಲ್ಲಿ ತೀರ್ಮಾನಬರುತ್ತದೆ, ನ್ಯಾಯಾಲಯದ ತೀರ್ಮಾನದಂತೆ ನಾವು ನಡೆದುಕೊಳ್ಳಲಿಕ್ಕೆ ತಯಾರಿದ್ದೇವೆ.

ಶ್ರೀ ಸುನೀಲ್‌ಕುಮಾರ್ : ಮಾನ್ಯ ಅಧ್ಯಕ್ಷರೆ, ಭಾವೈಕ್ಯತೆ ಎಂದು ಮಾನ್ಯ ಸಚಿವರು ಹೇಳುತ್ತಾರೆ. ಅಲ್ಲಿ ಯಾವುದೇ ಕಾರಣಕ್ಕೂ ಭಾವೈಕ್ಯತೆ ನಡೆಯುತ್ತಿಲ್ಲ. ನ್ಯಾಯಾಲಯ ಹಿಂದೂ ಪೂಜಾ ಪದ್ಧತಿ ಪ್ರಕಾರ ಪೂಜೆ ನಡೆಯಬೇಕೆಂದು ಆದೇಶ ಕೊಟ್ಟಾಗ ಅದನ್ನು ಯಾವುದೇ ಒಬ್ಬ

ಮುಸಲ್ಮಾನ ಮುಜಾವರ ಮಾಡಲಿಕ್ಕೆ ಸಾಧ್ಯವಿಲ್ಲ. ಹಾಗಾಗಿ ಹಿಂದೂ ದೇವರ ಪೂಜೆ ಮಾಡತಕ್ಕಂಥದ್ದು ಹಿಂದೂ ಅರ್ಚಕರೇ, ಈ ಹಿನ್ನೆಲೆಯಲ್ಲಿ ಸರ್ಕಾರ 1975ಕ್ಕಿಂತ ಹಿಂದೆ ಯಾವ ರೀತಿ ಪೂಜೆ ನಡೆಯುತ್ತಿದೆ ಅದರಂತೆ ಪೂಜೆ ನಡೆಯಬೇಕೆನ್ನುವಂಥ ಆದೇಶವನ್ನು ಕೋರ್ಟ್ ಕೊಟ್ಟಿದೆಯಂತಾದರೆ ಅಲ್ಲಿ ಹಿಂದೂಗಳ ಪದ್ಧತಿ ಪ್ರಕಾರ ಪೂಜೆ ನಡೆಯುತ್ತಿತ್ತು ಎನ್ನುವಂಥದ್ದಕ್ಕೆ ಸಾಕಷ್ಟು ದಾಖಲೆಗಳಿಂದ ಗೊತ್ತಾಗುತ್ತದೆ. ಹಾಗಾಗಿ 1975ಕ್ಕಿಂತ ಹಿಂದೆ ಇದ್ದಂಥ ಪೂಜಾ ಪದ್ಧತಿ ಪ್ರಕಾರ ಅಲ್ಲಿ ಪೂಜೆ ನಡೆಯಬೇಕೆನ್ನುವಂಥ ಆದೇಶವನ್ನು ನ್ಯಾಯಾಲಯ ಕೊಟ್ಟಿದೆಯೆಂದು ಹೇಳುತ್ತಿದ್ದಾರೆ. ಆ ಆದೇಶದ ಪ್ರಕಾರ ಇವತ್ತು ದತ್ತಾತ್ರೇಯ ಪೀಠದಲ್ಲಿ ನಡೆಯುತ್ತಿಲ್ಲ. ಅಲ್ಲಿರುವಂಥ ಆಡಳಿತವನ್ನು ಅಲ್ಲಿರುವಂಥ ಆದಾಯಕ್ಕೆ ಸಂಬಂಧಪಟ್ಟಂಥ ಕೆಲವೊಂದು ಚಟುವಟಿಕೆಗಳನ್ನು ನಡೆಸಬೇಕೆಂದು ಸರ್ಕಾರ ಮುಜಾವರಗಳನ್ನು ನೇಮಕ ಮಾಡಿದ್ದು. ದತ್ತಾತ್ರೇಯರ ಪಾದುಕೆಗಳಿಗೆ ಪೂಜೆ ಮಾಡಬೇಕೆನ್ನುವಂಥ ಆದೇಶವನ್ನು ನ್ಯಾಯಾಲಯ ಎಲ್ಲಿಯೂ ಕೂಡ ಕೊಟ್ಟಿಲ್ಲ. ಹಾಗಾಗಿ ಸರ್ಕಾರ ತಕ್ಷಣ ಮುಜಾವರಗಳನ್ನು ತೆಗೆದು ಹಿಂದೂ ಅರ್ಚಕರನ್ನು ದತ್ತಾತ್ರೇಯ ಪೀಠಕ್ಕೆ ನೇಮಕವನ್ನು ಯಾವಾಗ ಮಾಡುತ್ತೀರಿ ಎನ್ನುವಂಥ ಸಂಗತಿಯನ್ನು ಸ್ಪಷ್ಟಪಡಿಸಬೇಕು.

ಶ್ರೀ ಎಂ.ಪಿ. ಪ್ರಕಾಶ್ : ಈಗ ಅವರು ಹೇಳಿರತಕ್ಕಂಥದ್ದು ಅರ್ಧ ಸತ್ಯ. ಅರ್ಧಸತ್ಯ ಎನ್ನುವಂಥದ್ದಾಗಿದ್ದಾರೆ ಅರ್ಧ ಸತ್ಯ ಸುಳ್ಳುಗಿಂತಲೂ ಬಹಳ ಅಪಾಯಕಾರಿ. 1964ರ ಸುಮಾರಿನಲ್ಲಿ ಇದನ್ನು ವಕ್ಫ್ ಪ್ರಾಪರ್ಟಿಗೆ ಸೇರಿಸಿಕೊಳ್ಳಬೇಕೆನ್ನುವಂಥ ಪ್ರಸ್ತಾವ ಬಂತು. ಅದರ ವಿರುದ್ಧವಾಗಿ 75/76 ಎಂದು ಅಲ್ಲಿಯ ಒಂದು Original Suit ಅನ್ನು ಆ Civil Judge's Courtನಲ್ಲಿ ದಾವಾ ಹಾಕಿದರು. ಆ ದಾವದಲ್ಲಿ ಹೇಳಿದರು ಇದು ಧಾರ್ಮಿಕ ದತ್ತಿ ಇಲಾಖೆಗೆ ಸೇರ ಬೇಕಾಗಿರತಕ್ಕಂಥದ್ದು, ಇದನ್ನು ವಕ್ಫ್ ಪ್ರಾಪರ್ಟಿ ಎಂದು ಪರಿಗಣಿಸಬಾರದು ಎಂದು ನಿರ್ಣಯ ಆಯಿತು. ಕೆಲವು ಮುಸ್ಲಿಂ ಸಂಘಟನೆಗಳು ಅದರ ವಿರುದ್ಧ ಶ್ರೇಷ್ಠ ನ್ಯಾಯಾಲಯಕ್ಕೆ ಬಂದರು. ಅಲ್ಲಿಯೂ ಕೂಡ ಅದನ್ನು ವಜಾ ಮಾಡಲಾಯಿತು. ಅದಾದನಂತರ ಆ ಶ್ರೇಷ್ಠ ನ್ಯಾಯಾಲಯದ ಆಜ್ಞೆಯನ್ನು ಸುಪ್ರೀಂ ಕೋರ್ಟಿಗೆ ತೆಗೆದುಕೊಂಡು ಹೋದರು. ಸುಪ್ರೀಂ ಕೋರ್ಟಿನಲ್ಲಿಯೂ ಕೂಡ ಈ ಆಜ್ಞೆಯನ್ನು ರದ್ದು ಮಾಡಿದ್ದಾರೆ. ಅದಾದಮೇಲೆ ಇದನ್ನು 1983ನೇ ಇಸವಿಯಲ್ಲಿ ಆ ಉರುಸ್ ಮೊದಲಾಗಿರತಕ್ಕಂಥದ್ದನ್ನು ಮಾಡುವಾಗ ಅವರಿಗೆ ಇರತಕ್ಕಂಥ ಹಕ್ಕುಭಾದ್ಯತೆಗಳನ್ನೆಲ್ಲಾ ಕಳುಹಿಸಿಕೊಟ್ಟರು. ಇದಾದಮೇಲೆ ಧಾರ್ಮಿಕದತ್ತಿ ಇಲಾಖೆಗೆ ಸೇರಿರತಕ್ಕಂಥ ಈ ಒಂದು ಆಸ್ತಿಯ ವಿಲೇವಾರಿ ಮಾಡುವಾಗ ನಮ್ಮ ಕಾನೂನು ಬಹಳ ಸ್ಪಷ್ಟವಾಗಿ ಹೇಳುತ್ತದೆ. ಜೂನ್ ತಿಂಗಳ 1975ಕ್ಕಿಂತ ಹಿಂದೆ ಯಾವ ಸಂಪ್ರದಾಯಗಳಿದ್ದವು, ಯಾವ ನಡವಳಿಕೆಗಳು ಇದ್ದವು, ಯಾವ ಪರಂಪರೆಯನ್ನು ಅವರು ಅನುಸರಿಸಿಕೊಂಡು ಬಂದಿದ್ದರು, ಅದರಲ್ಲಿ ನಾವು ಹಸ್ತಕ್ಷೇಪವನ್ನು ಮಾಡಬಾರದೆಂದು ಹೇಳಿದರು. ಆ ಕಾರಣಕ್ಕಾಗಿಯೇ ಮುಜಾಹಿದ್‌ಗಳು ಅಲ್ಲಿ ಪೂಜೆಯನ್ನು ಮಾಡುತ್ತಿದ್ದರು. ದತ್ತಾತ್ರೇಯ ಪೀಠಕ್ಕೆ ಅವರು ಹೋಗಿ ಪೂಜೆ ಮಾಡತಕ್ಕಂಥದ್ದು, ಅಲ್ಲಿ ಬೇಕಾದರೆ ಮುಜಾಹಿದ್‌ಗಳು ಅವರನ್ನು ಕರೆದುಕೊಂಡು ಹೋಗಿ ಮುಜಾವರರು ಪಾದಪೂಜೆಗೆ ಪುಷ್ಪ ಅರ್ಪಿಸುತ್ತಾರೆ. ಅವರು ಭಕ್ತಾದಿಗಳಿಗೆ ಟಗರು ಮತ್ತು ತೀರ್ಥವನ್ನು ತಂದುಕೊಡುತ್ತಾರೆ. ಮುಜಾವರರು ಮಾತ್ರ ಪಾದುಕೆಗೆ ಪುಷ್ಪ ಅರ್ಪಿಸುತ್ತಾರೆ ಮತ್ತು ನಂದಾದೀಪ ಬೆಳಗಿಸುತ್ತಾರೆ, ಪ್ರಮುಖ ಹಿಂದೂ ಮಠಗಳ ಮಠಾಧಿಪತಿಗಳು ಪಾದುಕೆಗೆ ಗೌರವ ಸಲ್ಲಿಸಲು ಪೂಜೆಗೆ ಕರೆದುಕೊಂಡು ಹೋಗುತ್ತಾರೆ.

ಲಂಗರಖಾನೆಯಲ್ಲಿ ತಯಾರಿಸಲ್ಪಟ್ಟ ಆಹಾರವನ್ನು ಸ್ವೀಕರಿಸದೇ ಇರುವ ಭಕ್ತಾದಿಗಳಿಗೆ ಅಕ್ಕಿ, ಬೇಳೆ ಮುಂತಾದ ಆಹಾರ ವಸ್ತುಗಳನ್ನು ಅಡಿಗೆ ಮಾಡಿಕೊಳ್ಳಲು ಕೊಡುತ್ತಾರೆ. ಇದೆಲ್ಲಾ ಪರಂಪರೆ ಮತ್ತು ಪದ್ಧತಿ 75ರ ಆಚೆಯಿಂದ ಇರತಕ್ಕಂಥದ್ದು. ಈ ವಿಚಾರದಲ್ಲಿ ಆಗಿರುವ ಬಗ್ಗೆ ತಾವು ಪ್ರಶ್ನೆ ಮಾಡಿದ್ದೀರಿ. ಶ್ರೇಷ್ಠ ನ್ಯಾಯಾಲಯದಲ್ಲಿ ಈ ವಿಚಾರವಿದೆ. ಅದಕ್ಕಾಗಿ ಶ್ರೇಷ್ಠ ನ್ಯಾಯಾಲಯದಲ್ಲಿ ಇದರ ಬಗ್ಗೆ ಯಾವ ರೀತಿಯ ತೀರ್ಮಾನ ಕೊಡುತ್ತಾರೆ, ಎಂದು ಅದಕ್ಕಾಗಿ ಸರ್ಕಾರದವರು ಕಾಯುತ್ತಿದ್ದೇವೆ. ನಾವು ಯಾರ ಪರವೂ ಅಲ್ಲ, ಯಾರ ವಿರೋಧವೂ ಅಲ್ಲ. ತಾವು ಹೇಳಿದಂತೆ, ಯಾರೂ ಕೂಡ ಇಂಥ ಮತೀಯ ಭಾವೈಕ್ಯತೆಯನ್ನು ಕಾಪಾಡಿಕೊಂಡು ಹೋಗಲಿಕ್ಕೆ ಸಹಕಾರಿಯಾಗಿರುತ್ತಾರೆ, ಅವರೆಲ್ಲರೂ ಕೂಡ ಈ ಒಂದು ಗಣ ರಾಜ್ಯದಲ್ಲಿ ಇರಲು ಅರ್ಹರಾಗಿರುವ ಪ್ರಜೆಗಳಾಗಿರುತ್ತಾರೆ. ಆ ಕಾರಣಕ್ಕಾಗಿ, ಮತೀಯ ಭಾವನೆಗಳನ್ನು ಕೆರಳಿಸುವುದಾಗಲಿ, ಮತೀಯ ಭಾವನೆಗಳಿಗೆ ಉಲ್ಬಣ ಸ್ಥಿತಿಯನ್ನು ತಂದುಕೊಡುವುದಾಗಲಿ ನಾವು ಯಾರೂ ಮಾಡಬಾರದು. ಮೂಲಭೂತವಾದಿಗಳು ಈ ಕಡೆಯಿಂದ ಆಗಿರಬಹುದು, ಆ ಕಡೆಯಿಂದ ಆಗಿರಬಹುದು. ನಾನು ಉತ್ತರ ಕೊಡುತ್ತಿದ್ದೇನೆ.

ಶ್ರೀ ಸುನೀಲ್‌ಕುಮಾರ್ : ಮಾನ್ಯ ಅಧ್ಯಕ್ಷರೆ....

ಶ್ರೀ ಎಂ.ಪಿ. ಪ್ರಕಾಶ್ : ತಾವು ಹಾಗೆ ಮಾಡಿದ್ದೀರಿ ಎಂದು ನಾನು ಹೇಳಲಿಲ್ಲ.

ಅಧ್ಯಕ್ಷರು : ಮಾನ್ಯ ಸುನೀಲ್‌ಕುಮಾರ್‌ರವರೆ, ಅವರು ಉತ್ತರ ಹೇಳಲಿ. ನಂತರ, ನೀವು ಕೇಳಬೇಕು.

ಶ್ರೀ ಎಂ.ಪಿ. ಪ್ರಕಾಶ್ : ಹೈ–ಕೋರ್ಟಿನಲ್ಲಿ ಬರುವ ತೀರ್ಮಾನಕ್ಕಾಗಿ ನಾವು ಕಾಯುತ್ತಿದ್ದೇವೆ. ಹೈಕೋರ್ಟ್ ತೀರ್ಮಾನ ಆದಷ್ಟು ಬೇಗ ಬರಲೆಂದು ನಾನು ಆಶಿಸುತ್ತೇನೆ.

ಶ್ರೀ ಸಿ.ಟಿ. ರವಿ : ನಾನು ಆ ಕ್ಷೇತ್ರಕ್ಕೆ ಸಂಬಂಧಪಟ್ಟಿರುವವನಾದುದ್ದರಿಂದ ಹೇಳುತ್ತೇನೆ, ಹಿರಿಯ ಸಚಿವರಾದ ಎಂ.ಪಿ. ಪ್ರಕಾಶ್‌ರವರು ಅರ್ಧ ಸತ್ಯವನ್ನು ಹೇಳಿದ್ದಾರೆ. ಕೋರ್ಟಿಗೆ ಹಾಕಿದ್ದ ಮೂಲ ಧಾವೆಯಲ್ಲಿ ನಮಗೆ ಪೂಜೆಯ ಅವಕಾಶವನ್ನು ನಿರಾಕರಿಸಿದೆ ಎನ್ನುವ ಕಾರಣ ಮುಂದೊಡ್ಡಿ ಮೂಲ ಧಾವೆ ಹಾಕಿರುವುದು. ಆ ಮೂಲ ಧಾವೆಯನ್ನು ಚಿಕ್ಕಮಗಳೂರಿನ ಜಿಲ್ಲಾ ನ್ಯಾಯಾಲಯ ನಂತರ ಹೈ–ಕೋರ್ಟ್ ಎತ್ತಿ ಹಿಡಿದಿದೆ. ಆ ಎತ್ತಿಹಿಡಿದಿರುವುದರಲ್ಲಿ ನ್ಯಾಯಾಧೀಶರು ಬಹಳ ಸ್ಪಷ್ಟವಾಗಿ ಹೇಳಿರುವುದೇನೆಂದರೆ, Hindus should be allowed from this Peeta and Pooja without any hindrance. ಅಂದರೆ, ಯಾವುದೇ ಹಿಂಜರಿಕೆ ಇಲ್ಲದೆ ಮುಕ್ತವಾಗಿ ಪೂಜೆ ಮಾಡಲು ಅವಕಾಶವಿರುವುದರಿಂದ ಈಗೇನು ಮಾನ್ಯ ಹಿರಿಯ ಸಚಿವರು ಹೇಳುತ್ತಿದ್ದಾರೆ, ಅದರ ನಂತರ, ಮುಜರಾಯಿ ಕಮಿಷನರ್‌ರವರು ಹೊರಡಿಸಿರುವ ಆದೇಶವೇ ಹೊರತು ನ್ಯಾಯಾಲಯ ಹೊರಡಿಸಿರುವ ಆದೇಶವಲ್ಲ. ಹಾಗಾಗಿ, ನ್ಯಾಯಾಲಯದ ಆದೇಶ ಮುಜರಾಯಿ ಕಮಿಷನರ್‌ರವರ ಆದೇಶಕ್ಕಿಂತ ಉನ್ನತ ಮಟ್ಟದ್ದು ಎಂದು ನಾನು ಭಾವಿಸಿದ್ದೇನೆ. ಹಾಗಿರುವುದರಿಂದ, ಆ ನ್ಯಾಯಾಲಯದ ಆದೇಶವನ್ನು ಅನುಷ್ಠಾನಗೊಳಿಸಲು ಸರ್ಕಾರ ಮುಂದಾಗಬೇಕು. ಮುಜರಾಯಿ ಕಮಿಷನರ್‌ರವರು ಯಾವುದೋ ಪ್ರಭಾವಕ್ಕೆ .....

ಅಧ್ಯಕ್ಷರು : ಪ್ರಶ್ನೆ ಕೇಳಿ.

ಶ್ರೀ ಸಿ.ಟಿ. ರವಿ : ನಾನು ಸ್ಪಷ್ಟವಾಗಿ ಹೇಳುತ್ತಿದ್ದೇನೆ, ನ್ಯಾಯಾಲಯದ ಮೂಲ ಆದೇಶವೇನಿದೆ, ಆ ಆದೇಶವನ್ನು ಅನುಷ್ಠಾನಗೊಳಿಸಲು ಸರ್ಕಾರ ತಯಾರಾಗುತ್ತದೆಯೇ? ನಡುವೆ ಬಂದಿರುವ, ಮಧ್ಯಂತರ ಆಜ್ಞೆ ಕೊಟ್ಟಿರುವ ಮುಜರಾಯಿ ಕಮಿಷನರ್‌ರವರ ಆದೇಶವಲ್ಲ, ಅದರ ನಂತರ, ಉಚ್ಚ ನ್ಯಾಯಾಲಯವೂ ಆದೇಶ ಕೊಟ್ಟಿದೆ; ಅದಕ್ಕೆ ತಯಾರಾಗಬೇಕು.

ಶ್ರೀ ಎಂ.ಪಿ. ಪ್ರಕಾಶ್ : ಇಡೀ ಒರಿಜಿನಲ್ ಸೂಟ್‌ನ ತೀರ್ಮಾನ ನನ್ನ ಹತ್ತಿರವಿಲ್ಲ. ಆದರೆ, ನನಗೆ ಗೊತ್ತಿರುವ ಹಾಗೆ, ಇದನ್ನು ವಕ್ಫ್ ಪ್ರಾಪರ್ಟಿ ಎಂದು ಸೇರಿಸುವ ವಿಚಾರವನ್ನು ಅವರು 75:76ರ ದಾವೆಯನ್ನು ಮಾಡಿದ್ದರು. ಅದು ಮತ್ತೆ ಪುನರ್ ನಾಮಕರಣವಾಗಿ 25:78ರ ಎಂದು ಆಗಿ, ಅದರಲ್ಲಿ ತೀರ್ಮಾನವಾದ ಸಂದರ್ಭದಲ್ಲಿ ಇದನ್ನು ವಕ್ಫ್ ಪ್ರಾಪರ್ಟಿ ಯಾದಿಯಲ್ಲಿ ಸೇರಿಸಿರುವುದು ತಪ್ಪು, ಆದುದರಿಂದ, ನೀವು ಅದನ್ನು ಸರಿಯಾಗಿ ತೆಗೆದು ಹಾಕಿ, ಧಾರ್ಮಿಕ ದತ್ತಿ ಇಲಾಖೆ ನಿರ್ವಹಿಸಬೇಕೆಂದು ಮಾಡಿದ ತೀರ್ಮಾನ. ಆ ತೀರ್ಮಾನದ ವಿರುದ್ಧ ಕೆಲವು ಮುಸ್ಲಿಂ ಸಂಘಟನೆಗಳು ಸುಪ್ರೀಂಕೋರ್ಟ್‌ವರೆಗೂ ಹೋದರು. ಅವೆಲ್ಲಾ ತೀರ್ಮಾನವೂ ವಜಾ ಆಯಿತು. ಈಗ ಅಲ್ಲೇನು ಸಜ್ಜದ್‌ರವರು ಇದ್ದಾರೆ, ಅವರು ಇದನ್ನು ಯಾವಾಗಲೂ ಮಾಡುವ ಹಕ್ಕು ನಮಗಿದೆ ಎಂದು ಹೇಳಿ 83ರಲ್ಲಿ ಅದರ ನಂತರದಲ್ಲಿ ಕೂಡ ಪ್ರಸ್ತಾಪ ಮಾಡಿದರು. ತಾವು ಹೇಳಿದಂತೆ, ಧಾರ್ಮಿಕ ದತ್ತಿ ಇಲಾಖೆ ಕೊಟ್ಟಿರುವ ಆಜ್ಞೆ ಏನಿದೆ, ಅದು ನ್ಯಾಯಾಲಯದ ತೀರ್ಮಾನವಲ್ಲ. ಅದು ಒಂದು ನಮ್ಮ ಎಗ್ಜಿಕ್ಯೂಟೀವ್ ಆರ್ಡರ್. ಆದರೆ, ಆ ಆರ್ಡರ್ ಇರುವ ಕಾರಣ ಏನಿದೆ ಎಂದರೆ, ನಮ್ಮ ಹೊಸ ಕಾಯಿದೆ ಅನ್ವಯವಾಗಿ ದಿನಾಂಕ 1–3–85ರ ಆದೇಶದಲ್ಲಿ ರಾಜ್ಯ ಉಚ್ಚ ನ್ಯಾಯಾಲಯವು 75ಕ್ಕೂ ಹಿಂದೆ, ಈ ಸಂಸ್ಥೆಗಳಲ್ಲಿರುವ ಪದ್ಧತಿಗಳನ್ನು ಮುಜರಾಯಿ ಅಧಿಕಾರಿಗಳಿಂದ ವಿಚಾರಣೆ ನಡೆಸಿ, ಆ ಪದ್ಧತಿಗಳನ್ನು ಅನುಷ್ಠಾನಕ್ಕೆ ತರಲು ಧಾರ್ಮಿಕ ದತ್ತಿ ಆಯುಕ್ತರು ಆದೇಶಿಸಬೇಕೆಂದು ಹೇಳಿತು. ಅಂದರೆ, ಶ್ರೇಷ್ಠ ನ್ಯಾಯಾಲಯದವರೇ ಧಾರ್ಮಿಕ ದತ್ತಿ ಅಧಿಕಾರಿಗಳಿಗೆ ಒಂದು ಅಧಿಕಾರ ಕೊಟ್ಟರು; ನೀವು ಹೋಗಿ 75ರ ಆಚೆ ಏನೆಲ್ಲಾ ಪದ್ಧತಿಗಳಿದ್ದವು ಎಂದು ನೋಡಿ ಎಂದು ತಿಳಿಸಿದರು. ಆ ಪದ್ಧತಿಗಳಲ್ಲಿ ಯಾರೂ ಹಸ್ತಕ್ಷೇಪ ಮಾಡಬಾರದೆಂದು ಹೇಳಿದಾಗ, ಆ ಪದ್ಧತಿಗಳು ಇದ್ದದ್ದು ಸದರಿ ಸಂಸ್ಥೆಯೊಳಗೆ ಪೂಜೆ ಮಾಡಲು ಸಜ್ಜದ್‌ರವರು ಒಬ್ಬ ಮುಜಾವರ್ ರವರನ್ನು ನೇಮಿಸಿದ್ದಾರೆ. ಅವರು ಮಾತ್ರ ಗುಹೆಯೊಳಗೆ ಹೋಗುತ್ತಾರೆ. ಭಕ್ತಾದಿಗಳಿಗೆ ಟಿಚರು, ತೀರ್ಥವನ್ನು ಹಿಂದೂ–ಮುಸ್ಲಿಂ ಭಕ್ತಾದಿಗಳಿಗೆ ನೀಡುತ್ತಾರೆ. ಮುಜಾವರ್‌ರವರು ಮಾತ್ರ ಪಾದುಕೆಗೆ ಪುಷ್ಪ ಅರ್ಪಿಸುತ್ತಾರೆ ಮತ್ತು ನಂದಾದೀಪ ಬೆಳಗಿಸುತ್ತಾರೆ. ಪ್ರಮುಖವಾಗಿ ಹಿಂದೂ ಮಠದ ಮಠಾಧಿಪತಿಗಳಿಗೆ ಅವರು ಪಾದುಕೆಗೆ ಗೌರವ ಸಲ್ಲಿಸಲು ಗುಹೆಗೆ ಕರೆದುಕೊಂಡು ಹೋಗುತ್ತಾರೆ. ಲಂಗರಖಾನೆಯಲ್ಲಿ ತಯಾರಿಸಲ್ಪಟ್ಟಿರುವ ಆಹಾರವನ್ನು ಸ್ವೀಕರಿಸದಿರುವ ಭಕ್ತಾದಿಗಳಿಗೆ ಅಕ್ಕಿ, ಬೇಳೆ, ಮುಂತಾದ ಆಹಾರ ವಸ್ತುಗಳನ್ನು ಅಡಿಗೆ ಮಾಡಿಕೊಳ್ಳಲು ನೀಡುತ್ತಾರೆ. ಗರ್ಭಗುಡಿಯಲ್ಲಿ ದಿನವೂ ರಾತ್ರಿ 7 ರಿಂದ 9 ಗಂಟೆ ಅವಧಿಯಲ್ಲಿ ಮುಜಾವರ್‌ರವರು ಗರ್ಭಗೃಹದಲ್ಲಿ ದೈನಂದಿನ ಪೂಜಾ ವಿಧಿ ಆಚರಿಸುತ್ತಾರೆ. ಮೇಲ್ಕಂಡ ಪದ್ಧತಿಗಳು, ಹಿಂದು ಪದ್ಧತಿಗಳಾದ ಪಾದುಕೆಗೆ ಪುಷ್ಪವನ್ನು ಅರ್ಪಿಸುವುದು, ನಂದಾದೀಪವನ್ನು ಬೆಳಗುವುದು, ಭಕ್ತಾದಿಗಳಿಗೆ ತೀರ್ಥ ನೀಡುವುದು, ತೆಂಗಿನಕಾಯಿ ಒಡೆಯುವುದು, ಭಕ್ತಾದಿಗಳಿಗೆ ಪಡಿ ನೀಡುವುದು ಮತ್ತು ಹಿಂದೂ ಮಠಾಧಿಪತಿಗಳನ್ನು ಗೌರವದಿಂದ ಕರೆದೊಯ್ಯುವುದು ಮುಂತಾದವು ಎಂದು ವರದಿ ಮಾಡಿದ್ದಾರೆ. ಅಂದರೆ, ಹೈಕೋರ್ಟ್‌ನವರು

ಕೊಟ್ಟಿರುವ ಆ ತೀರ್ಮಾನದ ಹಿನ್ನೆಲೆಯಲ್ಲಿ, ಆ ತೀರ್ಮಾನವನ್ನು ಧಾರ್ಮಿಕ ದತ್ತಿ ಇಲಾಖೆಯವರು ಕೊಟ್ಟಿರುವ ವರದಿಯ ಆಧಾರದ ಮೇಲೆ ಅದರ ಜೊತೆಗೆ 1997ರ ಧಾರ್ಮಿಕ ಸಂಸ್ಥೆಗಳು ಮತ್ತು ಧರ್ಮದಾಯಿ ದತ್ತಿಗಳ 58ನೇ ಕಲಂ ಪ್ರಕಾರ, ಯಾವ್ಯಾವ ಸಂಪ್ರದಾಯಗಳು ಇದ್ದವು, ಆ ಸಂಪ್ರದಾಯಗಳನ್ನು ಅನೂಚಾನವಾಗಿ ನಡೆಸಿಕೊಂಡು ಹೋಗುವುದು ಎನ್ನುವ ರೀತಿಯ ಸುತ್ತೋಲೆಗಳನ್ನು ಕಳುಹಿಸಿದ್ದೆವು. ಈ ಕಾರಣಕ್ಕಾಗಿ ಅದನ್ನು ಪ್ರಶ್ನೆ ಮಾಡಿ, ಈಗ ಅದರ ಬಗ್ಗೆ ಒಂದು ರಿಟ್ ಪಿಟಿಷನ್ ಇದ್ದು, ಅದನ್ನು ಗುರುದತ್ತಾತ್ರೇಯ ಪೀಠದ ದೇವಸ್ಥಾನದ ಸಂವರ್ಧನಾ ಸಮಿತಿಯವರು ಹಾಕಿದ್ದಾರೆ. ನ್ಯಾಯಾಲಯದ ತೀರ್ಮಾನವನ್ನು ನಾವು ಕಾಯುತ್ತಿದ್ದೇವೆ. ಆ ತೀರ್ಪು ಬಂದ ಕೂಡಲೇ, ಅದಕ್ಕನುಗುಣವಾಗಿ ನಾವು ನಡೆದುಕೊಳ್ಳುತ್ತೇವೆ.

ಅಧ್ಯಕ್ಷರು : 2ನೇ ಪ್ರಶ್ನೆ. ದಯಮಾಡಿ ಕುಳಿತುಕೊಳ್ಳಿ. ಮಾನ್ಯ ಶಶಿಕಾಂತ್ ಅಕ್ಕಪ್ಪ ನಾಯ್ಕರವರ ಪ್ರಶ್ನೆ.

ಗೊಂದಲ

ಅಧ್ಯಕ್ಷರು : ಪ್ರಶ್ನೆ ಸಂ: 62 (545) ಇದನ್ನು ಆರ್ಥಿಕ ಇಲಾಖೆಯಿಂದ ವಾಣಿಜ್ಯ ಮತ್ತು ಕೈಗಾರಿಕಾ ಇಲಾಖೆಗೆ ವರ್ಗಾವಣೆ ಮಾಡಲಾಗಿದೆ. ಈಗ ಮಾನ್ಯ ಪ್ರಭಾಕರ ಬಂಗೇರರವರು ಪ್ರಶ್ನೆ ಕೇಳಿ.

ಗೊಂದಲ

ಅಧ್ಯಕ್ಷರು : ತಾವೆಲ್ಲಾ ಸಹಕರಿಸಬೇಕು. ನೀವು ಹೇಳುವ ರೀತಿಯಲ್ಲಿ ಸಭೆಯನ್ನು ನಡೆಸುವುದಕ್ಕಾಗುವುದಿಲ್ಲ. ನಿಯಮಾವಳಿಯನ್ನು ಅನುಸರಿಸಿ ಸಭೆ ನಡೆಯಬೇಕಾಗುತ್ತದೆ. ನಾನು 3 ಉಪ ಪ್ರಶ್ನೆಗಳಿಗೆ ಅವಕಾಶ ಮಾಡಿಕೊಟ್ಟಿದ್ದೇನೆ. ಮಾನ್ಯ ಸಚಿವರು ವಿವರವಾಗಿ ಉತ್ತರಿಸಿದ್ದಾರೆ. ದಯಮಾಡಿ ಎಲ್ಲರೂ ಕುಳಿತುಕೊಳ್ಳಬೇಕು.

ಗೊಂದಲ

ಅಧ್ಯಕ್ಷರು : ಮಾನ್ಯ ಪ್ರಭಾಕರ ಬಂಗೇರರವರೇ, ಪ್ರಶ್ನೆ ಕೇಳಿ. ಒಂದೇ ಪ್ರಶ್ನೆಗೆ 15 ನಿಮಿಷ ಹಿಡಿದಿದೆ.

ಗೊಂದಲ

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ : ಇದು ಭಾವನಾತ್ಮಕವಾದ ವಿಷಯ. ಚಿಕ್ಕಮಗಳೂರು ಮತ್ತು ಇಡೀ ರಾಜ್ಯದಲ್ಲಿ ದೊಡ್ಡ ಹೋರಾಟ ನಡೆಯುತ್ತಿದೆ.

ಅಧ್ಯಕ್ಷರು : ಮಾನ್ಯ ವಿಶ್ವೇಶ್ವರ ಹೆಗಡೆಯವರೆ, ದಯವಿಟ್ಟು ಕೇಳಿ, ಸಚಿವರು ವಿವರವಾಗಿ ಉತ್ತರಿಸಿದ್ದಾರೆ. ಈ ಪ್ರಶ್ನೆಗೆ ನಾನು 15 ನಿಮಿಷ ಕಾಲಾವಕಾಶ ಕೊಟ್ಟಿದ್ದೇನೆ. ನಿಯಮಗಳ ಪ್ರಕಾರ ನಡೆಯಬೇಕಾಗುತ್ತದೆ. ಬೇರೆ ರೀತಿಯಲ್ಲಿ ಇದನ್ನು ನೀವು ಎತ್ತಿ. ನಾನು ಈ ತರಹದ್ದಕ್ಕೆ ಅವಕಾಶ ಮಾಡುವುದಕ್ಕಾಗುವುದಿಲ್ಲ. ಪ್ರಭಾಕರ ಬಂಗೇರರವರೇ, ಪ್ರಶ್ನೆ ಕೇಳಿ.

ಗೊಂದಲ

ಅಧ್ಯಕ್ಷರು : ಮಾನ್ಯ ಸದಸ್ಯರು ಸಹಕರಿಸಬೇಕು. ನಾನು ಮಾನ್ಯ ಪ್ರಭಾಕರ ಬಂಗೇರರವರನ್ನು ಕರೆದಿದ್ದೇನೆ. ಪ್ರಭಾಕರ ಬಂಗೇರರವರೇ, ಪ್ರಶ್ನೆ ಕೇಳಿ.

ಗೊಂದಲ

ಅಧ್ಯಕ್ಷರು : ಪ್ರಭಾಕರ ಬಂಗೇರರವರೆ ಪ್ರಶ್ನೆ ಕೇಳಿ. ನಾನು ಯಾರನ್ನು ಕರೆದಿದ್ದೇನೆ, ಅವರು ಮಾತನಾಡಿದ್ದು ಮಾತ್ರ ರೆಕಾರ್ಡ್‌ಗೆ ಹೋಗಬೇಕು. ಬೇರೆ ಯಾರೂ ಮಾತನಾಡಿದ್ದು ರೆಕಾರ್ಡ್‌ಗೆ ಹೋಗಬಾರದು.

ಗೊಂದಲ

(ಈ ಸಂಧರ್ಭದಲ್ಲಿ ಮಾನ್ಯ ಸುನೀಲ್‌ಕುಮಾರ್ ಮಾನ್ಯ ಸಿ.ಟಿ. ರವಿ ಮತ್ತು ಇನ್ನೂ ಕೆಲವು ಬಿಜೆಪಿಯ ಸದಸ್ಯರು ಸದನದ ಬಾವಿಗೆ ತೆರಳಿದರು)

ಅಧ್ಯಕ್ಷರು : ಮಾನ್ಯ ರವಿಯವರೇ, ಈ ರೀತಿ ವರ್ತಿಸಿದರೆ ಹೇಗೆ? ಮಾನ್ಯ ಕಾರಜೋಳರವರೇ, ನೀವು ಉಪ ನಾಯಕರು, ನೀವು ನಿಮ್ಮ ಸದಸ್ಯರಿಗೆ ಹೇಳಬೇಕು. ಈ ತರಹವಾದರೆ ಸಭೆ ನಡೆಸುವುದಕ್ಕಾಗುವುದಿಲ್ಲ. ಈ ಪ್ರಶ್ನೆಗೆ 15 ನಿಮಿಷ ಅವಕಾಶ ಕೊಟ್ಟಿದ್ದೇನೆ. ಮಾನ್ಯ ಪ್ರಭಾಕರ ಬಂಗೇರರವರೇ, ಪ್ರಶ್ನೆ ಕೇಳಿ.

ಗೊಂದಲ

ಶ್ರೀ ಎಂ.ಪಿ. ಪ್ರಕಾಶ್ : ಬೇರೆ ರೂಪದಲ್ಲಿ ಕೊಡಿ.

ಗೊಂದಲ

ಅಧ್ಯಕ್ಷರು : ದಯವಿಟ್ಟು ಕುಳಿತುಕೊಳ್ಳಿ. ಮಾನ್ಯ ಕಾರಜೋಳರವರೇ, ದಯವಿಟ್ಟು ಸಹಕರಿಸಬೇಕು. ನಿಮಗೆ ಸಮಾಧಾನವಾಗುತ್ತದೆಯೋ, ಆಗುವುದಿಲ್ಲವೋ ಆ ಪ್ರಶ್ನೆ ಅಲ್ಲ. ನಿಮ್ಮ ಸಮಾಧಾನದ ಪ್ರಶ್ನೆ ಅಲ್ಲ.

ಗೊಂದಲ

ಅಧ್ಯಕ್ಷರು : ಮಾನ್ಯ ಪ್ರಭಾಕರ ಬಂಗೇರ ಅವರೇ, ತಾವು ತಮ್ಮ ಪ್ರಶ್ನೆ ಕೇಳಿ.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ : ಭಾವನಾತ್ಮಕವಾದ ವಿಷಯ ಅಲ್ಲಿ ಹತ್ತಾರು ವರ್ಷಗಳಿಂದ ಹೋರಾಟ ನಡೆಯುತ್ತಿದೆ...

ಗೊಂದಲ

ಶ್ರೀ ಜಿ.ವಿ. ಶ್ರೀರಾಮರೆಡ್ಡಿ : ಉತ್ತರ ಸರಿಯಿಲ್ಲವೆಂದರೆ ಅವರು ಬೇರೆ ರೂಪದಲ್ಲಿ ಕೇಳಲಿ ವಿವರವಾಗಿ ಚರ್ಚೆ ಮಾಡಲಿ.

ಅಧ್ಯಕ್ಷರು : ಈ ರೀತಿ ತಾವು ಎಲ್ಲಾ ತಮಗೆ ಇಷ್ಟ ಬಂದ ರೀತಿಯಲ್ಲಿ ನಡೆದುಕೊಳ್ಳುವುದಾದರೆ ಈ ಸಭೆಯನ್ನು ನಡೆಸಲಿಕ್ಕೆ ಸಾಧ್ಯವಾಗಲ್ಲ. ನಾನು ಮಾನ್ಯ ಪ್ರಭಾಕರ ಬಂಗೇರ ಅವರನ್ನು ಕರೆದಿದ್ದೇನೆ, ಅವರು ಪ್ರಶ್ನೆ ಕೇಳಬೇಕು... ಮಾನ್ಯ ಕಾರಜೋಳ್ ಅವರೇ ನಿಮ್ಮ ಸದಸ್ಯರಿಗೆ ಸ್ವಲ್ಪ ತಿಳುವಳಿಕೆ ಹೇಳಿ, ಅವರೆನ್ನೆಲ್ಲಾ ಸ್ವಲ್ಪ ಸಹಕರಿಸಲಿಕ್ಕೆ ಕೇಳಬೇಕು...

ಶ್ರೀ ಜಗದೀಶ್ ಶೆಟ್ಟರ್ : ದಯಮಾಡಿ ಅರ್ಧಗಂಟೆಗಳ ಕಾಲ ಚರ್ಚೆಗೆ ಅವಕಾಶ ಕೊಡಿ.

ಅಧ್ಯಕ್ಷರು : ಬೇರೆ ನಿಯಮಾವಳಿಯಲ್ಲಿ ಕೇಳಿ, ನೀವು ಅರ್ಧಗಂಟೆಗಳ ಕಾಲ ಚರ್ಚೆ ಮಾಡಬೇಕು ಎಂದರೆ ಮೊದಲು ನೀವು ನನಗೆ ನೋಟಿಸ್ ಕಳುಹಿಸಬೇಕು. ಪ್ರಶ್ನೋತ್ತರದಲ್ಲಿ ಮೂರು ಉಪ ಪ್ರಶ್ನೆಗೆ ಅವಕಾಶ ಮಾಡಿಕೊಟ್ಟಿದ್ದೇನೆ, ಇದೇನದು ತಮಾಷೆ ಮಾಡುತ್ತಿದ್ದೀರಾ?

ಶ್ರೀ ಹೆಚ್.ಡಿ. ಬಸವರಾಜ್ : ಹೆಚ್ಚಿನ ಚರ್ಚೆಗೆ ನೀವು ಅವಕಾಶ ಮಾಡಿಕೊಡಬೇಕು.

ಅಧ್ಯಕ್ಷರು : ನೀವು ಹೊಸಬರು, ವಿಚಾರವನ್ನು ತಿಳಿದುಕೊಳ್ಳಿ, ಮೂರು ಉಪ ಪ್ರಶ್ನೆಗಳಿಗೆ ಅವಕಾಶ ಮಾಡಿಕೊಟ್ಟಿದ್ದೇನೆ, ನೀವು ಹೇಳಿದ ರೀತಿಯಲ್ಲಿ ನಡೆದುಕೊಳ್ಳಲಿಕ್ಕೆ ಆಗುವುದಿಲ್ಲ, ಈ ಸಭೆಯ ನಿಯಮಾವಳಿಯ ರೀತಿಯಲ್ಲಿ ಅದನ್ನು ನೀವು ಆ ರೀತಿ ತೆಗೆದುಕೊಳ್ಳುವುದಕ್ಕೆ ಸಾಧ್ಯವಾಗುವುದಿಲ್ಲ. ಏನಿದು? ಕಾರಜೋಳ್ ಅವರೇ, ವಿವರವಾಗಿ ಏನಾದರೂ ಇಲ್ಲಿ ಚರ್ಚೆಯಾಗಬೇಕಾದರೆ ಬೇರೆ ರೂಪದಲ್ಲಿ ಕಳುಹಿಸಿ ಚರ್ಚೆ ಮಾಡುವುದಕ್ಕೆ ಅವಕಾಶ ಕೊಡುತ್ತೇನೆ. ಆದರೆ ಪ್ರಶ್ನೋತ್ತರ ವೇಳೆಯಲ್ಲಿ ಅವರು ಇಷ್ಟ ಬಂದ ರೀತಿಯಲ್ಲಿ ಚರ್ಚೆಗೆ ಅವಕಾಶ ಮಾಡಿಕೊಡುವುದಕ್ಕೆ ಸಾಧ್ಯವಾಗುವುದಿಲ್ಲ. ಅವರು ಹೊಸಬರು ಇದ್ದಾರೆ ಸ್ವಲ್ಪ ಅವರಿಗೆ ನಿಯಮಗಳನ್ನು ಹೇಳಿ. ಅವರಿಗೆ ಸ್ವಲ್ಪ ತಿಳುವಳಿಕೆ ಹೇಳಿ.

ಶ್ರೀ ಜಗದೀಶ್ ಶೆಟ್ಟರ್ : ದಯಮಾಡಿ ಅರ್ಧ ಗಂಟೆಗಳ ಕಾಲ ಚರ್ಚೆಗೆ ಇಟ್ಟುಬಿಡಿ.

ಅಧ್ಯಕ್ಷರು : ಅದನ್ನು ಈಗ ಇಡುವುದಕ್ಕೆ ಸಾಧ್ಯವಾಗುವುದಿಲ್ಲ, ಬೇರೆ ನಿಯಮಾವಳಿಯಲ್ಲಿ ಕಳುಹಿಸಿ ಅದನ್ನು ಫಿಕ್ಸ್ ಮಾಡುವುದು ನನ್ನದು. ದಯಮಾಡಿ ತಾವು ಎಲ್ಲಾ ತಮ್ಮ ತಮ್ಮ ಆಸನಗಳಿಗೆ ಹೋಗಿ, ನಿಮ್ಮ ನಿಯಮಾವಳಿಯ ಪ್ರಕಾರ ಚರ್ಚೆಯಾಗಬೇಕಾದರೆ ಅದನ್ನು ಕಳುಹಿಸಿಕೊಡಿ. ನಂತರ ಕನ್ಸಿಡರ್ ಮಾಡುತ್ತೇನೆ.

ಶ್ರೀ ಜಗದೀಶ್ ಶೆಟ್ಟರ್ : ಅರ್ಧ ಗಂಟೆಗೆ ಚರ್ಚೆಗೆ ಅವಕಾಶ ಕೊಡಿ.

ಅಧ್ಯಕ್ಷರು : ಮಾನ್ಯ ಶೆಟ್ಟರ್ ಅವರೇ, ತಾವು ವಿರೋಧ ಪಕ್ಷದ ನಾಯಕರಾಗಿದ್ದವರು. ನಾನು ಚರ್ಚೆಗೆ ಅವಕಾಶ ಮಾಡುವುದಕ್ಕೆ ಸಿದ್ದನಿದ್ದೇನೆ. ಆದರೆ ನೀವು ಬೇರೆ ನಿಯಮಾವಳಿಯ ರೂಪದಲ್ಲಿ ಕಳುಹಿಸಿ ನಾನು ಪ್ರಶ್ನೋತ್ತರ ನಡೆಸಬಾರದೇನು?

ಶ್ರೀ ಜಗದೀಶ್ ಶೆಟ್ಟರ್ : ಅಯಿತು ಸಾರ್. ಕಳುಹಿಸಿಕೊಡುತ್ತೇವೆ.

ಅಧ್ಯಕ್ಷರು : ಕಳುಹಿಸಿಕೊಡಿ, ಇವರಿಗೆಲ್ಲಾ ತಮ್ಮ ತಮ್ಮ ಆಸನಗಳಿಗೆ ಹೋಗಲಿಕ್ಕೆ ಹೇಳಿ. ಮಾನ್ಯ ಪ್ರಭಾಕರ ಬಂಗೇರ ಅವರು ಪ್ರಶ್ನೆ ಕೇಳಿ.

ಶ್ರೀ ಜಗದೀಶ್ ಶೆಟ್ಟರ್ : ಅರ್ಧ ಗಂಟೆಗಳ ಕಾಲ ಚರ್ಚೆಗೆ ಅವಕಾಶ ಕೊಡಿ. ಕಳುಹಿಸಿ ಕೊಡುತ್ತೇವೆ.

ಅಧ್ಯಕ್ಷರು : ಅಯಿತು ನೋಟಿಸ್ ಕಳುಹಿಸಿ ಕೊಡಲಿಕ್ಕೆ ಹೇಳಿ.. ಅವರು ನೋಟಿಸ್ ಕೊಡಲಿಕ್ಕೆ ಕೇಳಿ.. ದಯಮಾಡಿ ಕುಳಿತುಕೊಳ್ಳಿ, ದಯಮಾಡಿ ಸಹಕರಿಸಿ.. ನೀವು ಮೊದಲು ನೋಟಿಸ್ ಕೊಡಿ.

ಗೊಂದಲ

ಶ್ರೀ ಜಿ.ವಿ. ಶ್ರೀರಾಮರೆಡ್ಡಿ : ಚರ್ಚೆಗೆ ಯಾರೂ ಅಡ್ಡಿಪಡಿಸುವುದಿಲ್ಲ, ಚರ್ಚೆಗೆ ಅಡ್ಡಿಪಡಿಸತಕ್ಕಂಥ ಅವಶ್ಯಕತೆಯಿಲ್ಲ.

ಶ್ರೀ ಜಗದೀಶ್ ಶೆಟ್ಟರ್ : ಅದನ್ನೇ ಒಪ್ಪಿದ್ದೇವೆ, ತಾವು ಅರ್ಧಗಂಟೆಗಳ ಕಾಲ ಚರ್ಚೆಗೆ ಅವಕಾಶ ಕೊಡುತ್ತೇನೆಂದು ಹೇಳಿದಿರಿ...

ಅಧ್ಯಕ್ಷರು : ಮಾನ್ಯ ಶೆಟ್ಟರ್ ಅವರೇ, ನೋಟಿಸ್ ಕಳುಹಿಸದೇ ಹೇಗೆ? ಮೊದಲು ಅವರು ನೋಟಿಸ್ ಕಳುಹಿಸಲಿ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ : ಈ ರೀತಿ ಆದರೆ ಹೇಗೆ?

ಅಧ್ಯಕ್ಷರು : ಮಾನ್ಯ ಕಾರಜೋಳ್ ಅವರೇ, ನೀವು ಉಪ ನಾಯಕರು ಇದ್ದೀರಿ ನೋಡಿ. ನಿಮ್ಮ ಸದಸ್ಯರು ಯಾವ ರೀತಿಯಲ್ಲಿ ಎದ್ದುನಿಂತು, ಯಾವ ತರಹ ಗಲಾಟೆ ಮಾಡುತ್ತಾರೆ? ಈ ರೀತಿ ಆದರೆ ಸಭೆ ನಡೆಸುವುದಕ್ಕೆ ಯಾರ ಕೈಲೂ ಆಗುವುದಿಲ್ಲ. ಸಭೆಯನ್ನು ಕೆಲವು ಸದಸ್ಯರು ಗುತ್ತಿಗೆ ತೆಗೆದುಕೊಳ್ಳಲಿಕ್ಕೆ ಸಾಧ್ಯವಾಗುವುದಿಲ್ಲ. ಹೊಸ ಸದಸ್ಯರು ಇದ್ದಾರೆ. ಅವರೆಗೆಲ್ಲಾ ಸ್ವಲ್ಪ ತಿಳುವಳಿಕೆ ಹೇಳಿ. ಏನು ತಾವು ಗುತ್ತಿಗೆ ತೆಗೆದುಕೊಂಡಿರುವ ರೀತಿಯಲ್ಲಿ ಮಾತನಾಡುತ್ತೀರಿ? ಸಭೆ ನಡೆಯುವುದಕ್ಕೆ ಬಿಡುತ್ತಿಲ್ಲ. ದಿಸ್ ಈಸ್ ನಾಟ್ ಕರೆಕ್ಟ್... ಮಾನ್ಯ ಬಂಗೇರ್ ಅವರೇ ಕೇಳಿ..

ಶ್ರೀ ಆರ್. ಅಶೋಕ : ಮಂತ್ರಿಗಳು ಸರಿಯಾದ ಉತ್ತರ ಕೊಟ್ಟಿದ್ದರೆ ಅವರು ಏಕೆ ಧರಣಿ ಮಾಡುತ್ತಿದ್ದರು?

ಅಧ್ಯಕ್ಷರು : ದಯಮಾಡಿ ಆಶೋಕ್ ಅವರೇ, ಕುಳಿತುಕೊಳ್ಳಿ. ಬಂಗೇರ್ ಅವರೇ, ಕೇಳಿ... ಈ ರೀತಿಯಾದರೆ ಯಾವುದೇ ಕಾರಣಕ್ಕೂ ಸಭೆ ನಡೆಸುವುದಕ್ಕೆ ಸಾಧ್ಯವಾಗುವುದಿಲ್ಲ, ನಾನು ಪ್ರಭಾಕರ ಬಂಗೇರ ಅವರನ್ನು 61ನೇ ಪ್ರಶ್ನೆ ಕೇಳುವುದಕ್ಕೆ ಕರೆದಿದ್ದೇನೆ, ಅವರು ಹೇಳಬೇಕು ಉಳಿದವರೆಲ್ಲರೂ ದಯಮಾಡಿ ಸಹಕರಿಸಬೇಕು.

ಶ್ರೀ ಶಶಿಕಾಂತ್ ಅಕ್ಕಪ್ಪ ನಾಯ್ಕ : ನನ್ನ ಪ್ರಶ್ನೆಗೆ ಉತ್ತರ ಬರಲಿಲ್ಲ.

ಅಧ್ಯಕ್ಷರು : ಈಗಾಗಲೇ ಹೇಳಿದ್ದೇನ್ನೆಲ್ಲಾ ಅದು ವರ್ಗಾವಣೆಯಾಗಿದೆ, ವಾಣಿಜ್ಯ ಮತ್ತು ಕೈಗಾರಿಕಾ ಇಲಾಖೆಗೆ ವರ್ಗಾವಣೆಯಾಗಿದೆ. ಸಂಬಂಧಪಟ್ಟವರು ಅದನ್ನು ಉತ್ತರಿಸುತ್ತಾರೆ. ಬಂಗೇರ ಅವರೇ, ಕೇಳಿ.

(ಈ ಹಂತದಲ್ಲಿ ಧರಣಿ ನಿರತ ಸದಸ್ಯರು ತಮ್ಮ ತಮ್ಮ ಆಸನಗಳಿಗೆ ಹೋಗಿ ಕುಳಿತರು)

ಬೆಳ್ತಂಗಡಿ ತಾಲ್ಲೂಕಿನ ವೃದ್ಧಾಪ್ಯ ಅಂಗವಿಕಲ ಹಾಗೂ ವಿಧವಾ ವೇತನ ಫಲಾನುಭವಿಗಳು

63 (61) : ಶ್ರೀ ಪ್ರಭಾಕರ ಬಂಗೇರ ಕೆ. (ಬೆಳ್ತಂಗಡಿ) ಮಾನ್ಯ ಕಂದಾಯ ಮತ್ತು ಸಂಸದೀಯ ವ್ಯವಹಾರಗಳ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಬೆಳ್ತಂಗಡಿ ತಾಲ್ಲೂಕಿನಲ್ಲಿ 2002–03 ಹಾಗೂ 2004ನೇ ಸಾಲುಗಳಲ್ಲಿ ಮಂಜೂರಾಗಿರುವ ವೃದ್ಧಾಪ್ಯ ಅಂಗವಿಕಲ ಹಾಗೂ ವಿಧವಾ ವೇತನ ಪಡೆಯುವ ಫಲಾನುಭವಿಗಳ ಸಂಖ್ಯೆ ಎಷ್ಟಿದೆ;

ಆ) ಮಂಜೂರಾದ ಫಲಾನುಭವಿಗಳ ವೇತನ ವಿತರಣೆ ಸರಿಯಾಗಿ ಆಗಿಲ್ಲವೆಂಬುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಇ) ಈ ದಿಶೆಯಲ್ಲಿ ಸರ್ಕಾರ ಕೈಗೊಂಡ ಕ್ರಮಗಳೇನು;

ಈ) ಈ ಫಲಾನುಭವಿಗಳಿಗೆ ವೇತನ ಮಂಜೂರಾದ ದಿನಾಂಕದಿಂದಲೇ ಪಾವತಿಸುವ ವ್ಯವಸ್ಥೆ ಮಾಡಲಾಗುವುದೇ?

ಶ್ರೀ ಎಂ.ಪಿ. ಪ್ರಕಾಶ್ (ಕಂದಾಯ ಮತ್ತು ಸಂಸದೀಯ ವ್ಯವಹಾರಗಳ ಸಚಿವರು)

ಅ) ಬೆಳ್ತಂಗಡಿ ತಾಲ್ಲೂಕಿನಲ್ಲಿ 2002 ರಿಂದ 2004ನೇ ಸಾಲುಗಳಲ್ಲಿ ವೃದ್ಧಾಪ್ಯ ವೇತನ ಅಂಗವಿಕಲ ವೇತನ, ವಿಧವಾ ವೇತನ ಪಡೆದ ಫಲಾನುಭವಿಗಳ ವಿವರ ಈ ಕೆಳಗಿನಂತಿದೆ.